ಇಂದು ದಿ**: 13.08.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು**.**

ಪಾಟೀ ಸವಾಲು ವಾದಿಯ ಪರಃ ಶ್ರೀ ಎಂ ಎಸ್ ಎಸ್ **.,** ವಕೀಲರಿಂದ

1983 ಜುಲೈ ತಿಂಗಳಲ್ಲಿ ನಿಡಿಃ 12 ನ್ನು ಬರೆದಿರುತ್ತಾರೆ. ನಿಡಿಃ 12 ನ್ನು 1 ನೇ ಪ್ರತಿವಾದಿಯ ಮನೆಯಲ್ಲಿ 12-00 ರಿಂದ 3-00 ಗಂಟೆಯವರೆಗೆ ಬರೆದಿರುತ್ತಾರೆ. ಸದರಿ ನಿಡಿಃ 12 ನ್ನು ಬರೆಯುವಾ ಪರಪ್ಪ, ಕಸಪ್ಪನಹಳ್ಳಿಯವರು ಮತ್ತು ಉಳಿದಂತೆ ಯಾರು ಇದ್ದರು ಎಂದು ನೆನಪು ಇರುವುದಿಲ್ಲ. ಲಕ್ಷ್ಮೀದೇವರಹಳ್ಳಿಯವರು ಇದ್ದರು ಆದರೆ ಅವರ ಹೆಸರು ನೆನಪು ಇರುವುದಿಲ್ಲ. ನಿಡಿಃ 12 ನ್ನು ಕೈಬರಹಣಿಗೆ ಮಾಡಿರುತ್ತಾರೆ. ನಿಡಿಃ 12 ಪ್ರಕಾರ ಯಾರಿಗೆ ಯಾವ ಸರ್ವೆ ನಂಬರಿನಲ್ಲಿ ಎಷ್ಟು ವಿಸ್ತೀರ್ಣದ ಆಸ್ತಿ ಯಾವ ಚೆಕ್ಕು ಬಂದಿಯ ಮಧ್ಯದ ಆಸ್ತಿ ಬಂದಿರುತ್ತವೆ ಎಂದು ಹೇಳಲು ಆಗುವುದಿಲ್ಲ. ನಿಡಿಃ 12 ಕ್ಕೆ ಸಹಿ ಮಾಡಿರುವುದನ್ನು ಹೊರತುಪಡಿಸಿ ಅದರಲ್ಲಿ ಏನು ಬರೆದಿದೆ ಎಂದು ನನಗೆ ಖುದ್ದಾಗಿ ಗೊತ್ತಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ವಿಷಯವನ್ನು ನಾನೇ ಹೇಳಿ ಬರೆಸಿರುತ್ತೇನೆ. ನನಗೆ ಖುದ್ದು ಮಾಹಿತಿ ಇಲ್ಲದೆ ಇದ್ದರು ಸಹ ಪ್ರತಿವಾದಿಗಳಿಗೆ ಅನುಕೂಲ ಆಗಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು **2** ರಿಂದ **4** ನೇ ಪ್ರತಿವಾದಿಗಳ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು**.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ

(ವೈ.ಕೆ ಬೇನಾಳ್ )
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.

ಇಂದು ದಿ**: 13.08.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು**.**

ಪಾಟೀ ಸವಾಲು ವಾದಿಯ ಪರಃ ಶ್ರೀ ಎಂ ಎಸ್ ಎಸ್ **.,** ವಕೀಲರಿಂದ

ದಿಃ 28.07.1983 ರಂದು ನಿಡಿಃ 12 ನ್ನು ಬರೆದಿರುತ್ತಾರೆ. ಸದರಿ ಪತ್ರವನ್ನು ಬರೆಯುವಾಗ ಲಕ್ಕಪ್ಪ, ಕಲ್ಲೇಶ, ತಿಮ್ಮಣ್ಣ, ನಾನು, ಚಂದ್ರಶೇಖರಪ್ಪ, ಭದ್ರಣ್ಣ, ಪ್ರಕಾಶ ಇದ್ದರು. ನಿಡಿಃ 12 ರ ಪ್ರಕಾರ ಯಾರಿಗೆ ಯಾವ ಸರ್ವೆ ನಂಬರಿನಲ್ಲಿ ಎಷ್ಟು ವಿಸ್ತೀರ್ಣದ ಆಸ್ತಿ ಯಾವ ಚೆಕ್ಕು ಬಂದಿಯ ಮಧ್ಯದ ಆಸ್ತಿ ಬಂದಿರುತ್ತವೆ ಎಂದು ಹೇಳಲು ಆಗುವುದಿಲ್ಲ. ನಿಡಿಃ 12 ನ್ನು 1 ನೇ ಪ್ರತಿವಾದಿಯ ಮನೆಯಲ್ಲಿ ಬರೆದಿರುತ್ತಾರೆ. ನಿಡಿಃ 12 ರ ಸ್ಟ್ಯಾಂಪ್ ಪೇಪರನ್ನು ಎಂದು ತಂದಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಓದಿ ಹೇಳಿದ್ದಕ್ಕೆ ನಾನು ನಿಡಿಃ 12 ಕ್ಕೆ ಸಹಿಯನ್ನು ಮಾಡಿರುತ್ತೇನೆ. ನಿಡಿಃ 12 ರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿಲ್ಲದೆ ಇದ್ದರು ಸಹ ಗೊತ್ತಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಾಲು ವಿಭಾಗವಾಗಿದ್ದು ಅದಕ್ಕೆ ನಾನು ಸಹಿ ಮಾಡಿರುತ್ತೇನೆ ಎಂದು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಾನೇ ಹೇಳಿ ಬರೆಸಿರುತ್ತೇನೆ. ಪ್ರತಿವಾದಿಗಳಿಗೆ ಅನುಕೂಲ ಆಗಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು **2** ರಿಂದ **4** ನೇ ಪ್ರತಿವಾದಿಗಳ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು**.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ

(ವೈ.ಕೆ ಬೇನಾಳ್ )
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.

ಇಂದು ದಿ**: 13.08.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು**.**

ಪಾಟೀ ಸವಾಲು ವಾದಿಯ ಪರಃ ಶ್ರೀ ಎಂ ಎಸ್ ಎಸ್ **.,** ವಕೀಲರಿಂದ

1983 ರಲ್ಲಿ ನಿಡಿಃ 12 ನ್ನು ಬರೆದಿರುತ್ತಾರೆ. ಆದರೆ, ತಾರೀಖು ತಿಂಗಳು ಹೇಳಲು ಆಗುವುದಿಲ್ಲ. ನಿಡಿಃ 12 ರ ಸ್ಟಾಂಪ್ ಪೇಪರನ್ನು ಯಾರು ತಂದಿರುತ್ತಾರೆ ಎಂದು ಗೊತ್ತಿರುವುದಿಲ್ಲ. ನಿಡಿಃ 12 ರ ಪ್ರಕಾರ ಯಾರಿಗೆ ಯಾವ ಸರ್ವೆ ನಂಬರಿನಲ್ಲಿ ಎಷ್ಟು ವಿಸ್ತೀರ್ಣದ ಆಸ್ತಿ ಯಾವ ಚೆಕ್ಕು ಬಂದಿಯ ಮಧ್ಯದ ಆಸ್ತಿ ಬಂದಿರುತ್ತವೆ ಎಂದು ಹೇಳಲು ಆಗುವುದಿಲ್ಲ. ನಿಡಿಃ 12 ನ್ನು ಕೈಬರವಣಿಗೆ ಮಾಡಿರುತ್ತಾರೆ. ಆ ದಿನ ಲಕ್ಷ್ಮೀಹಳ್ಳಿ ಲಕ್ಕಪ್ಪ, ಕಲ್ಲೇಶಪ್ಪ, ಪರಣ್ಣ, ತಿಮ್ಮಯ್ಯ ಮತ್ತು ನಾನು ಇದ್ದೇವು. ನಮ್ಮನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ. ನಿಡಿಃ 12 ರಲ್ಲಿಏನು ಬರೆದಿರುವ ವಿಷಯಗಳು ಖುದ್ದಾಗಿ ಗೊತ್ತಿಲ್ಲ ಎನ್ನುವುದುನಿಜ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಸಿದ್ದಲಿಂಗಸ್ವಾಮಿಯವರು ಹೇಳಿ ಬರೆಸಿರುತ್ತಾರೆ. ಉಳಿದ ವಿಚಾರಗಳು ನನಗೆ ಗೊತ್ತಿಲ್ಲ ಎನ್ನುವುದು ನಿಜ. ನನಗೆ ಯಾವುದೇ ವಿಷಯ ಗೊತ್ತಿಲ್ಲದೆ ಇದ್ದರು ಸಹ ಸಿದ್ದಲಿಂಗಸ್ವಾಮಿ ಇವರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು **2** ರಿಂದ **4** ನೇ ಪ್ರತಿವಾದಿಗಳ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು**.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ

(ವೈ.ಕೆ ಬೇನಾಳ್ )
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.